

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 29-03-2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇಂದು ನಾನು ಪ್ರಸ್ತಾಪಿಸುವ ಬದರೀ ಸಹಾಬರಲ್ಲಿ ಮೊದಲನೆಯವರು ಹಝ್ರತ್ ತಲೀಬ್ ಬಿನ್ ಉಮೈರ್(ರ). ಅವರ ಉಪನಾಮ ಅಬೂ ಅದೀ. ಅವರ ತಾಯಿ ಉರ್ವ, ಅಬ್ದುಲ್ ಮುತ್ತಲಿಬರ ಪುತ್ರಿಯಾಗಿದ್ದರು. ಉರ್ವ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪಿತೃ ಸಹೋದರಿಯಾಗಿದ್ದರು. ಹಝ್ರತ್ ತಲೀಬ್ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ ಪ್ರಥಮರಲ್ಲಿ ಸೇರಿದ್ದರು. ಅವರು ಮುಸ್ಲಿಮರಾದ ನಂತರ ತನ್ನ ತಾಯಿಯ ಬಳಿಗೆ ಹೋಗಿ ಹೇಳಿದರು: ನಾನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಯಾಯಿಯಾಗಿರುವೆನು ಮತ್ತು ಸರ್ವಲೋಕ ಪರಿಪಾಲಕನಾದ ಅಲ್ಲಾಹನನ್ನು ನಂಬುತ್ತೇನೆ. ಅವರ ತಾಯಿ ಹೇಳಿದರು: ನಿನ್ನ ಬೆಂಬಲ ಮತ್ತು ಸಹಾಯಕ್ಕೆ ಹಕ್ಕುದಾರ ನಿನ್ನ ಸೋದರ ಮಾವನ ಮಗನೇ ಆಗಿದ್ದಾರೆ. ಎಂದರೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್. ಅಲ್ಲಾಹನಾಣೆ! ಮಹಿಳೆಯರಾದ ನಮಗೆ ಪುರುಷರ ಹಾಗಿರುವ ಶಕ್ತಿ ಇದ್ದಿದ್ದರೆ ನಾವು ಸಹ ಅವರನ್ನು ಆವಶ್ಯಕವಾಗಿ ಅನುಸರಿಸುತ್ತಿದ್ದೆವು. ಅವರಿಗೆ ಸಹಾಯ ಮತ್ತು ಪ್ರತಿರೋಧ ಒದಗಿಸುತ್ತಿದ್ದೆವು. ಆಗ ಹಝ್ರತ್ ತಲೀಬ್ ಹೇಳಿದರು: ನೀವು ಇಸ್ಲಾಮ್ ಧರ್ಮಕ್ಕೆ ಸೇರಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಏಕೆ ಅನುಸರಿಸುವುದಿಲ್ಲ. ನಿಮ್ಮ ಸಹೋದರ ಹಮ್ಝು ಮುಸ್ಲಿಮರಾಗಿದ್ದಾರೆ. ಆಕೆ ಹೇಳಿದರು: ನಾನು ನನ್ನ ಸಹೋದರಿಯರ ಅಭಿಪ್ರಾಯ ನೋಡಿ ಅವರೊಂದಿಗೆ ಸೇರುವೆನು. ಆಗ ಹಝ್ರತ್ ತಲೀಬ್ ಹೇಳಿದರು: ನಾನು ಅಲ್ಲಾಹನ ಇಚ್ಛೆಪ್ರಕಾರ ನಿಮ್ಮೊಂದಿಗೆ ಹೇಳುತ್ತೇನೆ. ನೀವು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿ ಹೋಗಿರಿ. ಅವರಿಗೆ ಸಲಾಮ್ ಹೇಳಿರಿ. ಅಲ್ಲಾಹನ ಹೊರತು ಆರಾಧನೆಗೆ ಅರ್ಹನು ಬೇರೆ ಯಾರೂ ಇಲ್ಲ ಎಂದೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅಲ್ಲಾಹನ ಸಂದೇಶವಾಹಕರೆಂದೂ ಸಾಕ್ಷಿ ಹೇಳಿರಿ. ಆಗ ಆಕೆ ಹೇಳಿದರು: ಅಲ್ಲಾಹನ ಹೊರತು ಆರಾಧನೆಗೆ ಅರ್ಹನು ಬೇರೆ ಯಾರೂ ಇಲ್ಲವೆಂದೂ ಮುಹಮ್ಮದ್ ಅವನ ಸಂದೇಶವಾಹನೆಂದೂ ನಾನು ಸಾಕ್ಷ್ಯ ಹೇಳುತ್ತೇನೆ. ಅನಂತರ ಆಕೆ ತನ್ನ ನಾಲಗೆ ಮೂಲಕ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಬೆಂಬಲ ನೀಡುತ್ತಿದ್ದರು. ಮತ್ತು ತನ್ನ ಪುತ್ರನೊಂದಿಗೆ ಸಹಾಯ ನೀಡಲು ಮತ್ತು ಅನುಸರಣೆ ದೋರಲು ಉಪದೇಶಿಸುತ್ತಿದ್ದರು.

ಹಝ್ರತ್ ತಲೀಬ್ ಬಗ್ಗೆ ಹೀಗೆ ವರದಿಯಾಗಿದೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಿಂದಿಸಿದ ಒಬ್ಬ ಬಹುದೇವಾರಾಧಕನನ್ನು ಗಾಯಗೊಳಿಸಿದ ಪ್ರಥಮ ವ್ಯಕ್ತಿ ಅವರಾಗಿದ್ದರು. ಅದರ ವಿವರಣೆ ಹೀಗಿದೆ: ಔಫ್ ಬಿನ್ ಸಬ್ರ ಸಹ್‌ಮಿ ಎಂಬ ಬಹುದೇವಾರಾಧಕ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಿಂದಿಸುತ್ತಾ ಇದ್ದಾಗ ಹಝ್ರತ್ ತಲೀಬ್ ಒಂಟೆಯ ದವಡೆಯ ಎಲುಬನ್ನು ಎತ್ತಿಕೊಂಡು ಅವನಿಗೆ ಹೊಡೆದು ಗಾಯಗೊಳಿಸಿದರು. ಯಾರೋ ಒಬ್ಬ ಹಝ್ರತ್ ತಲೀಬರ ತಾಯಿಗೆ ಹೇಳಿದನು: ನಿಮ್ಮ ಪುತ್ರ ಏನು ಮಾಡಿದನೆಂದು ನೀವು ನೋಡಲಿಲ್ಲವೇ? ಆಗ ತಾಯಿ ಹೇಳಿದರು: **ಇನ್ನ ತಲೀಬನ್ ನಸರಬ್ನ ಖಾಲಹೂ ವ ಸಆಹು ಫೀ ದಮಿಹೀ ವಮಾಲಿಹೀ.** ತಲೀಬ್ ತನ್ನ ಸೋದರಮಾವನ ಪುತ್ರನಿಗೆ ಸಹಾಯ ಮಾಡಿದನು. ಅವನು ತನ್ನ ರಕ್ತ ಮತ್ತು ಸಂಪತ್ತು ಮೂಲಕ ಅವನ ದುಃಖವನ್ನು ನಿವಾರಿಸಿದನು. ಕೆಲವು ವರದಿ ಪ್ರಕಾರ ಹಝ್ರತ್ ತಲೀಬ್ ಗಾಯಗೊಳಿಸಿದ ವ್ಯಕ್ತಿ ಅಬೂಲಹಬ್ ಅಥವಾ ಅಬೂಜಹಲ್ ಆಗಿದ್ದನು. ಇನ್ನೊಂದು ವರದಿ ಪ್ರಕಾರ ಈ ಆಕ್ರಮಣದ ಬಗ್ಗೆ ಹಝ್ರತ್ ತಲೀಬರ ತಾಯಿಗೆ ದೂರಿತ್ತಾಗ ಅವರು ಹೇಳಿದರು: ತಲೀಬನ ಜೀವಿತದ ಅತ್ಯುತ್ತಮ ದಿನ ಇದಾಗಿದೆ. ಅಲ್ಲಾಹನ ಕಡೆಯಿಂದ ಸತ್ಯದೊಂದಿಗೆ ಆಗಮಿಸಿದ ತನ್ನ ಸೋದರಮಾವನ ಪುತ್ರನ ಪರವಾಗಿ ಅವನು ಪ್ರತಿರೋಧಿಸಿದ ಈ ದಿನ.

ಹಝ್ರತ್ ತಲೀಬ್ ಅಬಿಸೀನಿಯಾ ದೇಶಕ್ಕೆ ವಲಸೆ ಹೋದ ಮುಸ್ಲಿಮರಲ್ಲಿ ಸೇರಿದ್ದರು. ಆದರೆ ಖುರೈಶಿಗಳು ಮುಸ್ಲಿಮರಾದರು ಎಂಬ ವದಂತಿ ಅಬಿಸೀನಿಯಾದಲ್ಲಿ ಹಬ್ಬಿದಾಗ ಅವರು ಮರಳಿ ಬಂದರು. ಅವರು ಮದೀನಕ್ಕೆ ವಲಸೆ ಹೋದಾಗ ಹಝ್ರತ್ ಅಬ್ದುಲ್ಲ ಬಿನ್ ಸಲ್ಮಾ ಅಜ್‌ಲಾನಿಯವರ ಮನೆಯಲ್ಲಿ ವಾಸಿಸಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ತಲೀಬ್ ಮತ್ತು ಹಝ್ರತ್ ಮುಂಝಿರ್ ಬಿನ್ ಅಮರ್ ಮಧ್ಯೆ ಸಹೋದರ ಸಂಬಂಧ ಸ್ಥಾಪಿಸಿದ್ದರು. ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದರು. ಅವರು ಹಿರಿಯ ಸಹಾಬರಲ್ಲಿ ಗಣಿಸಲ್ಪಡುತ್ತಿದ್ದರು. ಅಜ್‌ನಾದೀನ್ ಯುದ್ಧದಲ್ಲಿ ತನ್ನ 35ನೇ ವರ್ಷ ಪ್ರಾಯದಲ್ಲಿ ಅವರು ಶಹೀದರಾದರು.

ಇನ್ನೊಬ್ಬ ಸಹಾಬಿಯ ಹೆಸರು ಹಝ್ರತ್ ಸಾಲಿಮ್ ಮೌಲಾ ಬಿನ್ ಅಬೀ ಹುಝೈಫ(ರ). ಅವರ ಉಪನಾಮ ಅಬೂ ಅಬ್ದುಲ್ಲಾ. ತಂದೆಯ ಹೆಸರು ಮುಅಖ್ಖಿಲ್. ಅವರು ಸಹ ಹಿರಿಯ ಸಹಾಬರಲ್ಲಿ ಗಣಿಸಲ್ಪಡುತ್ತಾರೆ. ಅವರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನಕ್ಕೆ ವಲಸೆ ಹೋಗುವ ಮೊದಲೇ ಮದೀನಕ್ಕೆ ವಲಸೆ ಹೋಗಿದ್ದರು. ಹಝ್ರತ್ ಸಾಲಿಮ್ ಮತ್ತು ಮುಆಝ್ ಬಿನ್ ಮಾಯಿಸ್ ಮಧ್ಯೆ ಸಹೋದರ ಸಂಬಂಧವನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು

ಸ್ಥಾಪಿಸಿದ್ದರು. ಅವರು ಮದೀನದಲ್ಲಿ ಹಝ್ರತ್ ಉಬಾದ್ ಬಿನ್ ಬಶರ್‌ರವರ ಮನೆಯಲ್ಲಿ ವಾಸಿಸಿದ್ದರು. ಹಝ್ರತ್ ಉಮರ್(ರ) ವರದಿ ಮಾಡುತ್ತಾರೆ: ಮಕ್ಕದಿಂದ ಮದೀನಕ್ಕೆ ವಲಸೆ ಬಂದ ಮುಹಾಜಿರ್‌ಗಳು ಖುಬಾದ ಸಮೀಪ ಅಸಬ ಎಂಬಲ್ಲಿ ವಾಸಿಸಲು ತೊಡಗಿದರು. ಹಝ್ರತ್ ಸಾಲಿಮ್ ಆಗ ನಮಾಝ್‌ನಲ್ಲಿ ಇಮಾಮ್ ಆಗಿದ್ದರು. ಏಕೆಂದರೆ ಅವರು ಎಲ್ಲರಿಗಿಂತ ಹೆಚ್ಚು ಪವಿತ್ರ ಖುರ್‌ಆನ್ ಕಲಿತವರಾಗಿದ್ದರು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಬರೆಯುತ್ತಾರೆ: ವಿಮೋಚಿತರಾದ ಗುಲಾಮರು ಜ್ಞಾನ ಸಂಪಾದನೆಯಲ್ಲಿ ಉನ್ನತ ಸ್ಥಾನ ಗಳಿಸಿದ್ದರು. ಹಝ್ರತ್ ಸಾಲಿಮ್ ಬಿನ್ ಮುಅಖ್ಖಿಲ್ ಮೌಲಾ ಸಹಾಬರಲ್ಲಿ ವಿಶಿಷ್ಟ ಸ್ಥಾನವನ್ನು ಹೊಂದಿದ ವಿದ್ವಾಂಸರಾಗಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪವಿತ್ರ ಖುರ್‌ಆನನ್ನು ಕಲಿಸಲು ನಾಲ್ವರು ಸಹಾಬರನ್ನು ನೇಮಿಸಿದ್ದರು. ಅವರಲ್ಲೊಬ್ಬರು ಹಝ್ರತ್ ಸಾಲಿಮ್ ಆಗಿದ್ದರು.

ಒಂದು ವರದಿ ಹೀಗಿದೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಈ ನಾಲ್ಕು ಸಹಾಬರಿಂದ ಪವಿತ್ರ ಖುರ್‌ಆನ್ ಕಲಿಯಿರಿ: ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್, ಹಝ್ರತ್ ಸಾಲಿಮ್ ಮೌಲಾ ಅಬೂ ಹುಝೈಫ, ಹಝ್ರತ್ ಅಬೀ ಬಿನ್ ಕಅಬ್ ಮತ್ತು ಹಝ್ರತ್ ಮುಆಝ್ ಬಿನ್ ಜಬಲ್. ಒಂದು ವರದಿ ಹೀಗಿದೆ: ಒಮ್ಮೆ ಹಝ್ರತ್ ಆಯಿಶ(ರ) ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪಕ್ಕೆ ಬರಲು ತಡವಾಯಿತು. ಅದಕ್ಕೆ ಕಾರಣವೇನೆಂದು ಕೇಳಿದಾಗ ಹಝ್ರತ್ ಆಯಿಶ(ರ) ಹೇಳಿದರು: ಒಬ್ಬ ಖಾರಿ ಅತ್ಯಂತ ಸುಶ್ರಾವ್ಯವಾಗಿ ಪವಿತ್ರ ಖುರ್‌ಆನ್ ಪಠಿಸುತ್ತಿದ್ದರು. ಆ ತಿಲಾವತ್ ಆಲಿಸಲು ನಿಂತ ಕಾರಣ ತಡವಾಯಿತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಚಾದರವನ್ನು ಹೊದ್ದುಕೊಂಡು ಹೊರಗೆ ಹೋಗಿ ನೋಡಿದಾಗ ಹಝ್ರತ್ ಸಾಲಿಮ್ ತಿಲಾವತ್ ಮಾಡುತ್ತಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಇಂತಹ ಖಾರಿಗಳನ್ನು ನನ್ನ ಸಮುದಾಯದಲ್ಲಿ ಉಂಟು ಮಾಡಿದುದಕ್ಕೋಸ್ಕರ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತೇನೆ.

ಹಝ್ರತ್ ಖತಾದ ವರದಿ ಮಾಡುತ್ತಾರೆ: ಉಹುದ್ ಯುದ್ಧದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಗಾಯಗೊಂಡಿದ್ದರು. ಹಝ್ರತ್ ಸಾಲಿಮ್ ಗಾಯವನ್ನು ತೊಳೆಯುತ್ತಿದ್ದರು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ತನ್ನ ಪ್ರವಾದಿಯ ಜೊತೆಗೆ ಹೀಗೆ ವರ್ತಿಸಿದ ಸಮುದಾಯ ಹೇಗೆ ತಾನೆ ಜಯ ಗಳಿಸುವುದು. ಹಝ್ರತ್ ಸಾಲಿಮ್ ಹೇಳುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಖಿಯಾಮತ್ ದಿನದಂದು ಅಂತಹ ಒಂದು ಸಮುದಾಯವನ್ನು ತರಲಾಗುವುದು.

(ಹುಝೂರ್ ಹೇಳಿದರು:) ಇದು ಬಹಳ ಲಕ್ಷ್ಯಗೊಟ್ಟು ಆಲಿಸಬೇಕಾದ ವಿಷಯವಾಗಿದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಖಿಯಾಮತ್ ದಿನ ಎಂತಹ ಒಂದು ಸಮುದಾಯವನ್ನು ವಿಚಾರಣೆಗೆ ತರಲಾಗುವುದೆಂದರೆ ಅವರು ಮಾಡಿದ ಸತ್ಕರ್ಮಗಳು ತಹಾಮದ ಬೆಟ್ಟಗಳಷ್ಟು ಇರುವುದು. ಆದರೆ ಅವರನ್ನು ಅಲ್ಲಾಹನ ಮುಂದೆ ಹಾಜರುಪಡಿಸಿದಾಗ ಅಲ್ಲಾಹನು ಅವರ ಎಲ್ಲಾ ಸತ್ಕರ್ಮಗಳನ್ನು ಅಳಿಸಿಬಿಡುವನು ಮತ್ತು ಅವರನ್ನು ನರಕಾಗ್ನಿಗೆ ಹಾಕುವನು. ಆಗ ಹಝ್ರತ್ ಸಾಲಿಮ್ ಕೇಳಿದರು: ಯಾರಸೂಲುಲ್ಲಾಹ್, ನಮಗೆ ಅಂತಹ ಜನರ ಗುರುತು ಹೇಳಿರಿ. ನಾವು ಅವರನ್ನು ಆ ಮೂಲಕ ಗುರುತಿಸುವೆವು. ತಮ್ಮನ್ನು ಸತ್ಯದೊಂದಿಗೆ ಕಳುಹಿಸಿದವನ ಆಣೆ ಹಾಕಿ ಹೇಳುತ್ತೇನೆ ನಾನು ಸಹ ಅಂತಹ ಜನರೊಂದಿಗೆ ಸೇರುವವನಾಗುವ ಬಗ್ಗೆ ಹೆದರುತ್ತೇನೆ. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಆ ಜನರು ಉಪವಾಸ ಅನುಷ್ಠಿಸುವವರಾಗಿರುವರು, ನಮಾಝ್ ನಿರ್ವಹಿಸುವವರಾಗಿರುವರು. ರಾತ್ರಿ ಬಹಳ ಕಡಿಮೆ ನಿದ್ರಿಸಿ ನಫ್ಲ್ ನಮಾಝ್ ಮಾಡುವವರಾಗಿರುವರು. ಆದರೆ ಅಂತಹ ಜನರ ಮುಂದೆ ಎಂದಾದರೂ ಹರಾಮ್ (ನಿಷಿದ್ಧ ಪದಾರ್ಥ) ಇರಿಸಿದರೆ ಅವರು ಅದನ್ನು ತೆಗೆದುಕೊಳ್ಳಲು ಮುನ್ನುಗ್ಗುವರು. ಎಂದರೆ ಲೌಕಿಕ ದುರಾಶೆಗಳಲ್ಲಿ ಬೀಳುವರು. ಅವರು ಹರಾಮ್ (ನಿಷಿದ್ಧ) ಯಾವುದು ಹಲಾಲ್ (ಧರ್ಮಬದ್ಧವಾದುದು) ಯಾವುದು ಎಂದು ನೋಡಲಾರರು. ಈ ಕಾರಣದಿಂದ ಅಲ್ಲಾಹನು ಅವರ ಸತ್ಕರ್ಮಗಳನ್ನು ನಿರರ್ಥಕಗೊಳಿಸುವನು.

ಇದು ನಾವು ಯಾವಾಗಲೂ ಯೋಚಿಸಬೇಕಾದುದೂ ಬಹಳ ಭಯಪಡಬೇಕಾದುದೂ ಆಗಿರುವ ವಿಷಯವಾಗಿದೆ. ಅಲ್ಲಾಹನು ಪ್ರತಿಯೊಬ್ಬನಿಗೂ ಯಾವಾಗಲೂ ತನ್ನನ್ನು ಪರಿಶೋಧಿಸುವ ಭಾಗ್ಯ ನೀಡಲಿ.

ಹಝ್ರತ್ ಅಬ್ದುಲ್ಲಾ ಬಿನ್ ಉಮರ್‌ರವರ ಪುತ್ರರ ಹೆಸರು ಸಾಲಿಮ್, ವಾಖಿದ್ ಮತ್ತು ಅಬ್ದುಲ್ಲಾ ಎಂದಾಗಿತ್ತು. ಕೆಲವು ಹಿರಿಯ ಸಹಾಬರ ಹೆಸರು ಪ್ರಕಾರ ಈ ಹೆಸರು ಇರಿಸಲಾಗಿತ್ತು. ಸಾಲಿಮ್ ಎಂಬ ಪುತ್ರನ ಹೆಸರನ್ನು ಹಝ್ರತ್ ಸಾಲಿಮ್ ಮೌಲಾರ ಹೆಸರು ಪ್ರಕಾರ ಇರಿಸಲಾಗಿತ್ತು. ಹಝ್ರತ್ ಸಯೀದ್ ಬಿನ್ ಮುಸೀಬ್ ಹೇಳುತ್ತಾರೆ: ನನ್ನೊಂದಿಗೆ ಹಝ್ರತ್ ಅಬ್ದುಲ್ಲಾ ಬಿನ್ ಉಮರ್ ಹೇಳಿದರು: ನನ್ನ ಪುತ್ರನ ಹೆಸರು ಸಾಲಿಮ್ ಎಂದು ಇಟ್ಟಿರುವುದು ಏಕೆಂದು ನಿಮಗೆ ಗೊತ್ತಿದೆಯೇ? ನಾನು ಹೇಳಿದೆ: ನನಗೆ ಗೊತ್ತಿಲ್ಲ. ಆಗ ಅವರು ಹೇಳಿದರು: ನಾನು ನನ್ನ ಪುತ್ರನಿಗೆ ಹಝ್ರತ್ ಸಾಲಿಮ್ ಮೌಲಾರವರ ನೆನಪಿಗೆ ಈ ಹೆಸರು ನೀಡಿದೆ. ಅವರು ಹೇಳಿದರು: ನನ್ನ ಪುತ್ರನಿಗೆ ವಾಖಿದ್ ಎಂದು ಹೆಸರಿಟ್ಟದ್ದು ಏಕೆಂದು ನಿಮಗೆ ಗೊತ್ತಿದೆಯೇ? ನಾನು ಹೇಳಿದೆ: ಇಲ್ಲ. ಅವರು ಹೇಳಿದರು: ಹಝ್ರತ್ ವಾಖಿದ್ ಬಿನ್ ಅಬ್ದುಲ್ಲಾ ಬಿನ್ ಬೂಈರವರ ಹೆಸರಿಗೆ ಅನುಸಾರವಾಗಿ ಆ ಹೆಸರು ಇರಿಸಿದೆ. ಅವರು ಕೇಳಿದರು: ನನ್ನ ಇನ್ನೊಬ್ಬ ಪುತ್ರನಿಗೆ ಅಬ್ದುಲ್ಲಾ ಎಂದು ಹೆಸರು ಇರಿಸಿದ್ದು ಯಾಕೆಂದು ತಿಳಿದಿದೆಯೇ? ನಾನು ಇಲ್ಲವೆಂದಾಗ ಅವರು ಹೇಳಿದರು: ಹಝ್ರತ್ ಅಬ್ದುಲ್ಲಾ ಬಿನ್ ರವಾಹರ ಹೆಸರು ಪ್ರಕಾರ ಆ ಹೆಸರು ಇಟ್ಟಿದ್ದೇನೆ.

ಹಝ್ರತ್ ಅಬ್ದುಲ್ಲಾ ಬಿನ್ ಉಮರ್ ವರದಿ ಮಾಡುತ್ತಾರೆ: ಒಂದು ಯುದ್ಧದಲ್ಲಿ ನಾವು ಹಝ್ರತ್

ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗಿದ್ದೆವು. ಯುದ್ಧವು ಕಠಿಣವಾದ ಕಾರಣ ಕೆಲವರು ಗಾಬರಿಗೊಂಡರು. ನಾನು ನನ್ನ ಆಯುಧ ಎತ್ತಿಕೊಂಡು ಹೊರಟಾಗ ನಾನು ಸಾಲಿಮರನ್ನು ಕಂಡೆನು. ಅವರ ಕೈಯಲ್ಲಿ ಆಯುಧವಿತ್ತು. ಅವರ ಮುಖ ಘನ ಗಂಭೀರವಾಗಿತ್ತು. ಅವರು ಗಾಬರಿಗೊಂಡಿರಲಿಲ್ಲ. ಅವರು ಮುನ್ನುಗ್ಗುತ್ತಿದ್ದರು. ನಾನು ಸಹ ಅವರನ್ನು ಹಿಂಬಾಲಿಸಿದೆ. ನಾವು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪ ತಲಪಿದಾಗ ಅವರು ಕೋಪಗೊಂಡಿರುವುದಾಗಿ ಕಂಡೆವು. ಅವರು ಹೇಳಿದರು: ಜನರೇ, ಇದೆಂತಹ ಗಾಬರಿ, ಇದೆಂತಹ ಭಯ. ಈ ಇಬ್ಬರು ಸತ್ಯವಿಶ್ವಾಸಿಗಳು ತೋರಿಸಿದಂತಹ ಧೈರ್ಯ ನೀವು ಸಹ ಯಾಕೆ ತೋರಿಸುವುದಿಲ್ಲ?

ಇಬ್ರಾಹೀಮ್ ಬಿನ್ ಹಂದಲ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಯಮಾಮ ಯುದ್ಧದಲ್ಲಿ ಹಝ್ರತ್ ಸಾಲಿಮ್‌ರೊಂದಿಗೆ ಹೇಳಲಾಯಿತು: ನೀವು ಪತಾಕೆಯನ್ನು ಸಂರಕ್ಷಿಸಿರಿ. ಕೆಲವರು ಹೇಳಿದರು ನಮಗೆ ತಮ್ಮ ಜೀವದ ಬಗ್ಗೆ ಹೆದರಿಕೆ ಇದೆ. ಆದುದರಿಂದ ಬೇರೆ ಒಬ್ಬರಿಗೆ ಪತಾಕೆ ವಹಿಸಿಕೊಡುತ್ತೇವೆ. ಆಗ ಹಝ್ರತ್ ಸಾಲಿಮ್ ಹೇಳಿದರು: ನನಗೆ ಪವಿತ್ರ ಖುರ್‌ಆನಿನ ಬಹಳ ಜ್ಞಾನವಿದೆ. ನಾನು ಅದರ ಉಪದೇಶ ಪ್ರಕಾರ ಕೆಲಸ ಮಾಡದಿದ್ದರೆ ಬಹಳ ಕೆಟ್ಟದಾಗುವುದು ಎಂದು ಹೇಳಿದರು. ಯುದ್ಧದಲ್ಲಿ ಅವರ ಬಲಗೈ ತುಂಡಾದಾಗ ಅವರು ಪತಾಕೆಯನ್ನು ತನ್ನ ಎಡಗೈಯಲ್ಲಿ ಹಿಡಿದರು. ಅವರ ಎಡಗೈ ಸಹ ತುಂಡಾದಾಗ ಅವರು ಪತಾಕೆಯನ್ನು ಕೊರಳಲ್ಲಿ ಅಮುಕಿ ಹಿಡಿದರು. ಅವರು ಹೀಗೆ ಹೇಳುತ್ತಾ ಇದ್ದರು– **ವಮಾ ಮುಹಮ್ಮದುನ್ ಇಲ್ಲಾ ರಸೂಲ್. ವ ಕಅಯ್ಯಿನ್ ಮಿನ್ ನಬಿಯ್ಯಿನ್ ಖಾತಲ ಮಅಹೂ ರಿಬ್ಬಿಯೂನ ಕಸೀರುನ್.** ಅಂದರೆ, ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅಲ್ಲಾಹನ ಸಂದೇಶವಾಹಕ ಮಾತ್ರವಾಗಿದ್ದಾರೆ. ಎಷ್ಟೋಂದು ಪ್ರವಾದಿಗಳು – ಆ ಪ್ರವಾದಿ ಗಳೊಂದಿಗೆ ಸೇರಿಕೊಂಡು ದೇವ ಭಕ್ತರಾದ ಅನುಯಾಯಿಗಳು ಯುದ್ಧ ಮಾಡಿದ್ದಾರೆ. (ಪವಿತ್ರ ಖುರ್‌ಆನ್ 3: 145,147). ನಂತರ ಹಝ್ರತ್ ಸಾಲಿಮ್ ಬಿದ್ದುಬಿಟ್ಟಾಗ ತನ್ನ ಸಂಗಡಿಗರೊಂದಿಗೆ ಕೇಳಿದರು: ಅಬೂ ಹುಝೈಫರ ಸ್ಥಿತಿ ಹೇಗಿದೆ. ಜನರು ಹೇಳಿದರು: ಅವರು ಶಹೀದರಾದರು. ಇನ್ನೊಬ್ಬರ ಹೆಸರು ಹೇಳಿ ಅವರ ಬಗ್ಗೆ ವಿಚಾರಿಸಿದಾಗ ಅವರು ಸಹ ಶಹೀದರಾದರೆಂದು ಉತ್ತರ ಲಭಿಸಿತು. ಆಗ ಹಝ್ರತ್ ಸಾಲಿಮ್ ಹೇಳಿದರು: ನನ್ನನ್ನು ಅವರಿಬ್ಬರ ಮಧ್ಯೆ ಮಲಗಿಸಿರಿ. ಹಾಗೆ ಹಝ್ರತ್ ಸಾಲಿಮ್ ಸಹ ಶಹೀದರಾದರು.

ಹಝ್ರತ್ ಝೈದ್ ಬಿನ್ ಸಾಬಿತ್ ವರದಿ ಮಾಡುತ್ತಾರೆ: ಹಝ್ರತ್ ಸಾಲಿಮ್ ಶಹೀದರಾದಾಗ ಜನರು ಹೇಳಿದರು: ಪವಿತ್ರ ಖುರ್‌ಆನಿನ ಕಾಲುಭಾಗ ಹೊರಟು ಹೋಯಿತು. ಎಂದರೆ ಯಾವ ನಾಲ್ಕು ವಿದ್ವಾಂಸರಿಂದ ಪವಿತ್ರ ಖುರ್‌ಆನ್ ಕಲಿತುಕೊಳ್ಳಬೇಕೆಂದು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದ್ದರೋ ಅವರಲ್ಲೊಬ್ಬರು ಅಗಲಿ ಹೋದರು.

ಇನ್ನೊಬ್ಬ ಸಹಾಬಿ ಹಝ್ರತ್ ಉತ್‌ಬಾನ್ ಬಿನ್ ಮಾಲಿಕ್(ರ). ಅವರು ಖಝ್ರಜ್ ಗೋತ್ರದ ಬನೂ ಸಾಲಿಮ್ ಬಿನ್ ಔಫ್ ಶಾಖೆಗೆ ಸೇರಿದವರಾಗಿದ್ದರು. ಅವರ ಮತ್ತು ಹಝ್ರತ್ ಉಮರ್‌ರವರ ಮಧ್ಯೆ ಸಹೋದರ ಸಂಬಂಧವನ್ನು ಸ್ಥಾಪಿಸಲಾಗಿತ್ತು. ಅವರು ಬದರ್, ಉಹುದ್ ಮತ್ತು ಖಂದಕ್ ಯುದ್ಧಗಳಲ್ಲಿ ಭಾಗವಹಿಸಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೀವಿತ ಕಾಲದಲ್ಲಿ ಅವರಿಗೆ ದೃಷ್ಟಿಹೀನತೆ ಬಾಧಿಸಿತ್ತು. ಹಝ್ರತ್ ಮುಆವಿಯರ ಆಡಳಿತದ ಕಾಲದಲ್ಲಿ ಅವರು ನಿಧನ ಹೊಂದಿದರು. ಒಂದು ವರದಿ ಹೀಗಿದೆ: ಹಝ್ರತ್ ಉತ್‌ಬಾನರು ದೃಷ್ಟಿಹೀನರಾದಾಗ ಅವರು ಬಾಜಮಾಅತ್ ನಮಾಝ್‌ನಲ್ಲಿ ಭಾಗವಹಿಸದಿರಲು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಅನುಮತಿ ಕೇಳಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದರು: ನಿಮಗೆ ಅಝಾನ್ ಕೇಳಿಸುತ್ತಿದೆಯೋ? ಹಝ್ರತ್ ಉತ್‌ಬಾನ್ ಹೇಳಿದರು: ಕೇಳಿಸುತ್ತಿದೆ. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರಿಗೆ ಅನುಮತಿ ನೀಡಲಿಲ್ಲ. ಬುಖಾರಿಯ ಒಂದು ವರದಿಯಿಂದ ತಿಳಿಯುವುದೇನೆಂದರೆ ಅನಂತರ ಉತ್‌ಬಾನ್‌ರಿಗೆ ಮನೆಯಲ್ಲಿಯೇ ನಮಾಝ್ ನಿರ್ವಹಿಸುವ ಅನುಮತಿ ಈ ಶರತ್ತಿನೊಂದಿಗೆ ನೀಡಲಾಯಿತು. ಅಂದರೆ, ಅವರು ನಮಾಝ್ ನಿರ್ವಹಿಸುವ ಸ್ಥಳದಲ್ಲಿ ಬಾಜಮಾಅತ್ ನಮಾಝಿಗೆ ವ್ಯವಸ್ಥೆ ಮಾಡಬೇಕು ಎಂಬ ಶರತ್ತಿನೊಂದಿಗೆ. ಹಝ್ರತ್ ಉತ್‌ಬಾನರ ವಿನಂತಿ ಪ್ರಕಾರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರ ಮನೆಗೆ ಹೋಗಿ ಒಂದು ಸ್ಥಳದಲ್ಲಿ ನಮಾಝ್ ನಿರ್ವಹಿಸಿದರು. ಆ ಸ್ಥಳವನ್ನು ಬಾಜಮಾಅತ್ ನಮಾಝ್‌ಗೆ ನಿಗದಿ ಪಡಿಸಿದರು.

ಇಲ್ಲಿ ಸಹ ಅಹ್ಮದಿಯರು ದೂರದಲ್ಲಿ ವಾಸಿಸುತ್ತಿದ್ದಾರೆ. ವಾಹನ ಸೌಕರ್ಯವಿಲ್ಲದಿದ್ದರೆ, ಅವರು ತಮ್ಮ ಮನೆಗಳಲ್ಲಿ ನಮಾಝ್ ಸೆಂಟರ್‌ಗಳನ್ನು ವ್ಯವಸ್ಥೆ ಮಾಡಬೇಕು. ನೆರೆಹೊರೆಯವರು ಸೇರಿ ಬಾಜಮಾಅತ್ ನಮಾಝ್ ನಿರ್ವಹಿಸಬೇಕು. ಅಲ್ಲಾಹನು ಎಲ್ಲರಿಗೂ ಈ ಅಜ್ಞೆಯನ್ನು ಪಾಲಿಸುವ ಭಾಗ್ಯ ನೀಡಲಿ – ಆಮೀನ್.

ಈಗ ನಾನು ನಮಾಝೆ ಜನಾಝ ಗಾಯಿಬ್ ನಿರ್ವಹಿಸಲಿರುವ ಕೆಲವು ಜನರ ಬಗ್ಗೆ ಪ್ರಸ್ತಾಪಿಸುವೆನು. ಮೊದಲನೆಯವರು, ಮುಕರ್ರಮ್ ಗುಲಾಮ್ ಮುಸ್ತಫಾ ಅಲ್‌ವಾನ್ ಸಾಹಿಬ್ ರಬ್ವದವರು. ಅವರು ಮಾರ್ಚ್ ದಿನಾಂಕ 16ರಂದು ತನ್ನ 78ನೇ ವಯಸ್ಸಿನಲ್ಲಿ ನಿಧನ ಹೊಂದಿದರು. **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** ಅವರು ಜನ್ಮತಃ ಅಹ್ಮದಿಯಾಗಿದ್ದರು. ಅವರ ಕುಟುಂಬದಲ್ಲಿ ಅವರ ಅಜ್ಜ ದೀವಾನ್ ಬಕ್ಷ್ ಸಾಹಿಬ್ ಮುಖಾಂತರ ಅಹ್ಮದಿಯ್ಯತ್ ಪ್ರವೇಶಿಸಿತು. ಅವರು ಐದು ಹೊತ್ತಿನ ನಮಾಝ್ ಮಾತ್ರವಲ್ಲ ತಹಜ್ಜುದ್ ನಿರ್ವಹಿಸುವವರೂ ತಖ್ವಭರಿತ, ಸೃಷ್ಟಿಗಳ ಬಗ್ಗೆ ಅನುಕಂಪವಿರುವ, ಸರಳ ಸ್ವಭಾವಿಯಾಗಿದ್ದರು. ಬಹಳ ದುಆ ಮಾಡುವವರೂ ಅತಿಥಿ ಸತ್ಕಾರ ಪ್ರಿಯರೂ ಬಡವರಿಗೆ ಸಹಾಯ ಮಾಡುವವರೂ ಕುಟುಂಬ ಸಂಬಂಧ ಸಂರಕ್ಷಿಸುವವರೂ ಧರ್ಮಕ್ಕೆ ಅದ್ಯತೆ ನೀಡುವವರೂ ಆಗಿದ್ದರು. ಜಮಾಅತ್ ನಿಝಾಮಿನೊಂದಿಗೆ ಮತ್ತು ಖಿಲಾಫತ್‌ನೊಂದಿಗೆ ಗಾಢವಾದ ಸಂಬಂಧ

ಹೊಂದಿದ್ದರು. ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ.

ಎರಡನೆಯ ಜನಾಝು ಮುಕರ್‍ರಮ ಅಮತುಲ್ ಹಯ್ಯ್ ಸಾಹಿಬ ಅವರದು. ಅವರು ಮುಹಮ್ಮದ್ ನವಾಝ್ ಸಾಹಿಬ್ ಕಾಟ್‌ಗಡಿಯರ ಪತ್ನಿಯಾಗಿದ್ದರು. ಅವರು ಮಾರ್ಚ್ ದಿನಾಂಕ 15ರಂದು ನಿಧನ ಹೊಂದಿದರು. **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** ಅವರು ಎರಡು ವರ್ಷ ಪ್ರಾಯದವರಾಗಿದ್ದಾಗ ಅವರ ಪಿತ ನಿಧನ ಹೊಂದಿದ್ದರು. ಅವರ ದೊಡ್ಡಪ್ಪ ಮುಹಮ್ಮದ್ ಇಬ್ರಾಹೀಮ್ ಸಾಹಿಬ್ ಅವರ ಪಾಲನೆ ಪೋಷಣೆ ನಿರ್ವಹಿಸಿದರು. ಅವರು ಜನ್ಮತಃ ಅಹ್ಮದಿಯಾಗಿದ್ದರು. ಅವರ ಕುಟುಂಬ 1903ರಲ್ಲಿ ಅಹ್ಮದಿಯ್ಯತ್ ಸ್ವಿಕರಿಸಿತು. ಅವರು ಮೂಸಿಯ ಆಗಿದ್ದರು. ಅವರಿಗೆ ಆರು ಪುತ್ರರೂ ಐವರು ಪುತ್ರಿಯರೂ ಇದ್ದಾರೆ. ಅವರ ಪುತ್ರ ಹಾಫಿಝ್ ಮಹ್‌ಮೂದ್ ಸಾಹಿಬ್ ಹೇಳುತ್ತಾರೆ, ನಮ್ಮ ತಂದೆ ತಾಯಂದಿರು ತಮ್ಮ ಜೀವಿತದಲ್ಲಿ ಜಮಾಅತಿನ ಸೇವೆಗೆ ಆದ್ಯತೆ ನೀಡುತ್ತಿದ್ದರು. ನಮ್ಮನ್ನು ಜಮಾಅತ್ ನಿಝಾಮ್ ಮತ್ತು ಖಿಲಾಫತ್‌ನೊಂದಿಗೆ ಸಂಬಂಧ ಸ್ಥಾಪಿಸುವಂತೆ ಮಾಡಲು ಮತ್ತು ಬಾಜಮಾಅತ್ ನಮಾಝ್ ಬಗ್ಗೆ ಬದ್ಧರಾಗಲು ಪ್ರತಿಯೊಂದು ತ್ಯಾಗಕ್ಕೆ ಸಿದ್ಧವಾಗುತ್ತಿದ್ದರು. ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ. ಮಗ್‌ಫಿರತ್‌ನೊಂದಿಗೆ ವರ್ತಿಸಲಿ. ಅವರ ಮಕ್ಕಳು ಮತ್ತು ಅವರ ಸಂತಾನ ಪರಂಪರೆ ಅವರ ಒಳಿತುಗಳನ್ನು ಜಾರಿಯಲ್ಲಿರಿಸುವಂತೆ ಅಲ್ಲಾಹನು ಮಾಡಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis*** *(atba)*

*At,Masjid Baithul Futhuh London, UK. On 29-03-2019.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

**Email**: *khutuba.kannada@gmail.com*

**You can find all the Sermons archived at**: www.alislam.org/friday-sermon